ತ್ತದೆ. ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಲು ಸಿ.ಒ.ಡಿ. ಯವರಿಗೆ ಒಪ್ಪಿಸಿ ಈಗಾಗಲೇ ಕ್ರಮ ಜರುಗಿಸಲಾಗಿದೆ.

SRI K. BHASKAR NAIDU.—Sir, I want to have a cup of coffee. There is no coffee in the canteen. Is it a canteen for us or is it for somebody else to make business ?

MR. DPEUTY SPEAKER.—Certainly it is for legislators.

SRI K. BHASKAR NAIDU.—There is no coffee there.

MR. DEPUTY SPEAKER.—I will take action. Hon. Member Sri Ram Bhat, please put your supplementary

ಶ್ರೀ ಕೆ. ರಾಮಭಟ್.—ಚುನಾವಣೆಗಳನ್ನು ಮುಂದಕ್ಕೆ ಹಾಕುವುದರಿಂದ ಈ ರೀತಿಯಾಗುತ್ತಿದೆ. ಚುನಾವಣೆಗಳನ್ನು ಮುಂದಕ್ಕೆ ಹಾಕುವುದು ಈ ವರ್ಷ ಕೊನೆಯಾಗುತ್ತದೆಯೇ ? ಚುನಾವಣೆಗಳನ್ನು ಮುಂದಕ್ಕೆ ಹಾಕುವುದರಿಂದ ಈ ರೀತಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ .—ಚುನಾವಣೆಗಳನ್ನು ಮುಂದಕ್ಕೆ ಹಾಕಿದ ಮೇಲೆ ಈ ರೀತಿಯಾಗಿಲ್ಲ, ೧೯೭೫-೭೬ರಲ್ಲೇ ಈ ರೀತಿ ಆಗಿರುವುದು,

Distripution of Sites to SSs in Byadagi Towa

985 SRI M. M. MALAGI (Byadagi).—Will the Minister for Housing and Urban Development be pleased to state —

(a) the number of siteless persons recognised in Byadagi town.

(b) out of them. the number of persons belonging to Scheduled Castes ;

(c) whether the sites have been give in all the above stated siteless persone ;

(d) if not, the reasons for the same ?

SRI DHARAM SINGH (Minister for Housing and Urban Development).—

(a) 922,

(b) 86.

(c) The following 168 sites only have been distributed.

(1)	to the persons belonging to Scheduled Castes	31
(2)	to other persons	137
		168

(d) The remaining persons belonging to Scheduled Castes and Low Income Group have constructed houses tres-passing into the lands at Survey Nos. 191 : 2 192 : 2B of Byadagi town. They are refusing to vacate this place and to have alternate sites. The above said land is in possession of the Agricultural Produce Marketing Society of Byadagi taluk and the said Committee has agreed to release the land in favour of Town Municipality. The Town Municiplity has to regularies the unauthorised construction of houses by paying compensation,

ಶ್ರೀ ಎಂ. ಎಂ. ಮಾಳಗಿ.—ಬ್ಯಾಡಗಿ ಟೌನ್‌ನಲ್ಲಿ ೯೨೨ ಜನ ನಿವೇಶನರಹಿತರಿಗೆ ೧೬೮ ನಿವೇಶನಗಳನ್ನು ವಿತರಣೆ ಮಾಡಿದ್ದೇವೆಂದು ಮಂತ್ರಿಗಳು ಹೇಳಿದ್ದಾರೆ. ಅಲ್ಲಿ ಇನ್ನೂ ೭೦೦ ಜನರಿಗೆ ನಿವೇಶನ ವಿತರಣೆಯಾಗಿಲ್ಲ. ಏಕೆಂದರೆ ಲ್ಯಾಂಡ್ ಅಕ್ವಿಜಿಷನ್ ಮಾಡಿಕೊಂಡಾಗ ಅಧಿಕಾರಿಗಳು ಪರಿಹಾರವನ್ನು ಕೊಡುವಾಗ ವ್ಯತ್ಯಾಸ ಮಾಡುತ್ತಿದ್ದಾರೆ. ಅದೇ ಜಾಗದಲ್ಲಿ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಕಮಿಟಿಯವರು ೧೨ ಸಾವಿರ ಚಿಲ್ಲರೆಗೆ ಭೂಮಿಯನ್ನು ಅಕ್ವೈರ್ ಮಾಡಿದಾಗ ನಗರ ಸಭೆಯವರು ಕೇವಲ ೪ ಸಾವಿರಕ್ಕೆ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಹೋದಾಗ ಜಮೀನು ಕೊಡಲು ಯಾರೂ ಮುಂದೆ ಬರುವುದಿಲ್ಲ. ಎ.ಪಿ.ಎಂ.ಸಿಯವರು ಕೊಡುವ ಹಾಗೂ ನಗರ ಸಭೆಯವರು ಹೆಚ್ಚು ಪರಿಹಾರ ಕೊಡುವುದಾದರೆ ಬಡವರಿಗೆ ನಿವೇಶನ ಕೊಡಲಿಕ್ಕೆ ಅನುಕೂಲವಾಗುತ್ತದೆ. ಮಂತ್ರಿಗಳು ಈ ರೀತಿಯ ತಾರತಮ್ಯ ಆದ ಹಾಗೆ ಮಾಡಲು ಏನು ವ್ಯವಸ್ಥೆ ಮಾಡುತ್ತಾರೆ?

ಶ್ರೀ ಧರ್ಮಸಿಂಗ್.—ಬ್ಯಾಡಗಿಯಲ್ಲಿ ನಿವೇಶನ ಇಲ್ಲದವರನ್ನು ಗುರುತಿಸುವುದು ೯೨೨ ಜನರನ್ನು ಈಗಾಗಲೇ ೧೭೨ ಜನರಿಗೆ ಸೈಟು ಕೊಟ್ಟಿದ್ದೇವೆ. ನಾನು ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ಮಾತನಾಡಿ ಆದಾಗ ೩೦೬ ನಿವೇಶನಗಳನ್ನು ಕೊಡಲು ೧೬ ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಮಾನ್ಯ ಸದಸ್ಯರು ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳುವಾಗ ಪರಿಹಾರ ಕೊಡುವ ಬಗ್ಗೆ ಇರುವ ತಾರತಮ್ಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಏನು ವ್ಯಕ್ತ ಮಾಡುತ್ತಿದ್ದಾರೆ ಅದು ನಿಜ. ಅದನ್ನು ಸೆರಿಪಡಿಸಿ ೧೬ ಎಕರೆ ಭೂಮಿಯನ್ನು ವಶಪಡಿಸಿಕೊಂಡು ೩೦೬ ಜನರಿಗೆ ಮುಂದಿನ ತಿಂಗಳು ಮೋಶನಗಳನ್ನು ಹಂಚುತ್ತಿದ್ದೇವೆ. ಒಟ್ಟು ೪೭೮ ಸೈಟುಗಳನ್ನು ಕೊಡಬೇಕೆಂದು ವ್ಯವಸ್ಥೆ ಮಾಡಿ ನಿದ್ದೀವೆ. ಸರ್ವೆ ನಂಬರ್ ೧೬೨ರಲ್ಲಿ ೧೧ ಎಕರೆ ಜಮೀನನ್ನು ವಶಪಡಿಸಿಕೊಂಡು ೨೮೦ ಜನರಿಗೆ ಸೈಟು ಮಾಡತಕ್ಕ ವ್ಯವಸ್ಥೆ ಮಾಡಿದ್ದೇನೆ. ಮಾರ್ಕೆಟ್ ಕಮಿಟಿ ಇರುವ ಕಡೆ ಹರಿಜನರು ಮನೆ ಕಟ್ಟಿಕೊಂಡಿದ್ದಾರೆ. ಅವರು ಬಿಡಲಿಕ್ಕೆ ಇಷ್ಟಪಡುವುದಿಲ್ಲ, ಅದಕೋಸ್ಕರ ಅವರಿಗೆ ಅಲ್ಲೇ ಸೈಟುಗಳನ್ನು ಕೊಡಲು ಜಮೀನನ್ನು ತೆಗೆದುಕೊಂಡಿದ್ದೇವೆ. ಉಳಿದ ಎಲ್ಲರಿಗೂ ಸೈಟು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಎಂ. ಮಾಳಗಿ. ಇಲ್ಲಿ ರೆವಿನ್ಯೂ ಮಂತ್ರಿಗಳೂ ಸಹ ಇದ್ದಾರೆ. ತಾವೂ ಸಹ ಇದ್ದೀರಿ : ಆದ್ದರಿಂದ ತಮ್ಮಗಳ ಗಮನಕ್ಕೆ ತರುವುದೇನೆಂದರೆ. ನಗರಸಭೆಯವರ ಜಮೀನಿಗೆ ಎಕರೆಗೆ ೧೨,೫೦೦ ರೂ. ಪರಿಹಾರ ಕೊಡಬೇಕು ಮತ್ತು ಖಾಸಗಿಯವರ ಜಮೀನಿಗೆ ಎಕರೆಗೆ ೬ ಸಾವಿರ ರೂ. ಗಳ ಪರಿಹಾರ ಕೊಡಬೇಕೆಂದು ಅಲ್ಲಿನ ಸ್ಪೆಷಲ್ ಡಿ.ಸಿ. ಅವರು ಆದೇಶ ನೀಡಿದ್ದಾರೆ ಈ ಒಂದು ತಾರತಮ್ಯ ಏತಕ್ಕೆ ? ಯಾವುದೇ ಜಮೀನು ಆಗಲಿ, ಎಕರೆಗೆ ೬ ಸಾವಿರಕಿಂತ ಹೆಚ್ಚಾಗಿರಬಾರದೆಂದು ನಾನು ಹೇಳುತ್ತೇನೆ. ಈ ಮೊದಲು ನಗರಸಭೆಯವರು ತಮ್ಮ ಜಮೀನನ್ನು ಬಿಟ್ಟು ಕೊಡಲು ಮುಂದೆ ಬರಲಿಲ್ಲ. ಆದರೆ ನಾನು ಸರ್ಕಾರದಕಡೆ ಮಾತನಾಡುತ್ತೇನೆಂದು ಹೇಳಿದ ಮೇಲೆ ಅವರು ಬಿಟ್ಟುಕೊಡಲು ಮುಂದೆ ಬಂದಿದ್ದಾರೆ. ಆದ್ದರಿಂದ ಎಲ್ಲರಿಗೂ ಒಂದೇರೀತಿ ಪರಿಹಾರ ಕೊಡುತ್ತೀರಾ?

ಶ್ರೀ ಧರ್ಮಸಿಂಗ್.—ಈ ವಿಚಾರದಲ್ಲಿ ನಾನು ಸಹ ಅವರಿಗೆ ಆದೇಶ ಕೊಡುತ್ತೇನೆ ಮತ್ತು ತಾವು ಸಹ ಈ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸಬೇಕು. ಏಕೆಂದರೆ ಹರಿಜನರಿಗೆ ಪುಕ್ಕಟೆಯಾಗಿ ನಿವೇಶನ ಹಂಚಬೇಕೆಂಬುಬುದೇ ನಮ್ಮ ಸರ್ಕಾರದ ಧೋರಣೆಯಾಗಿದೆ. ಈ ರೀತಿ ಒಂದು ಕಾಸೂ ತೆಗೆದುಕೊಳ್ಳದೆ ನಿವೇಶನ ಕೊಟ್ಟರೆ ಈ ಜಾತಿ ಜನರಿಗೆ ಸಹಾಯ ಮಾಡಿದಂತೆ ಆಗುತ್ತದೆ.